

ಮಾಡತಿದ್ದ. ದೇಸಾಯರಿಗೆ ಮಹಾರಾಷ್ಟ್ರ, ಕರ್ನಾಟಕದಾಗ ನೂರಾರು ಕೂರಗಿ ಹೊಲ ಇದ್ವಂತ. ಅವರು ಸಾಂಗ್ಲಿಯ ದೇಸಾಯಿ ಒಬ್ಬರ ಅಳಿಯಂದಿರು'.

'ಅಡ್ಡಾಡಾಕ ಆಗದವಂಗ ಏಳು ಮಂದಿ ಹೆಂಡ್ರು, ಮ್ಯಾಲೊಬ್ಬಳು ಸೂಳಿ...' ಅಂತಾರಲ್ಲ ಹಂಗ ದೇಸಾಯರಿಗೆ ಹೆಂಗಸರ ಶೋಕಿ. ಏಳೆಂಟು ಊರಾಗ ಅವರ ಹೆಂಗಸರಿದ್ದರು! ಅವಂಗ ಸಂತಾನ ಇರಲಿಲ್ಲ. ಮಾಧವಣ್ಣಂಗೂ ಸಂತಾನ ಇರಲಿಲ್ಲ. ದೇಸಾಯರು ಸತ್ತ ಮ್ಯಾಲ ಅವರ ಆಸ್ತಿಗಳ ಉಸಾಬರಿ ಇವನೇ ನೋಡತಿದ್ದ. ಹೊಲಗಳಿಂದ ಬರೋ ಹುಟ್ಟುವಳಿ ಮ್ಯಾಲನ ಅವನ ಜೀವನ ನಡೀತಿತ್ತು. ಮಾಧವಣ್ಣ ಸಾಯೂ ಮುಂದ ಬೆಳಗಾವ್ಯಾಗ ಇದ್ದ. ಅಲ್ಲಿ ಒಬ್ಬಾಕಿ ಕೂಡ ಅವಂಗ ಸಂಬಂಧ ಇತ್ತಂತ. ಆಕಿ ಮಗಳು ಮೀರಾ ಅನ್ನೋವಾಕಿ ಅಣ್ಣನ್ನ ತನ್ನ ಅಪ್ಪ ಅಂತ ತಿಳಿದಿದ್ದಳಂತ! ಅಪ್ಪನ ಹೊಲದಾಗ ನಂಗ ಪಾಲು ಬರಬೇಕಂತ ಆಕೀ ಕೋರ್ಟಿಗೆ ಹೋಗ್ಯಾಳಂತ. ಏಳೆಂಟು ವರ್ಷಗಳ ಹಿಂದ ಒಮ್ಮೆ ಮೀರಜಕ ನನ್ ಮನಿಗೂ ಬಂದಿದ್ದಳ್ರಿ. ಹೊಲ ಮಾಧವಣ್ಣಂದಲ್ಲ ಅಂತ ಆಕೀಗ ಸ್ಪಷ್ಟ ಹೇಳಿ ಕಳಿಸಿದ್ದೆ. ಅಣ್ಣ ಸತ್ತ ಮ್ಯಾಲ ನಾ ಒಮ್ಮೆ ರಾಯಭಾಗಕ್ಕೆ ಹೋಗಿದ್ದೆ. ಸಾಗುವಳಿದಾರರು ನನ್ನ ದಾದು ಮಾಡಲಿಲ್ಲ. ಹುಟ್ಟುವಳಿಯಾಗ ಪಾಲು ಕೊಡಾಕ ವಲ್ಲೆ ಅಂದರು. ನಾ ಮೀರಜ್ ಮುನಿಸಿಪಾಲಿಟಿಯಾಗ ನೌಕರಿ ಮಾಡತಿದ್ದೆ. ಸುಹಾಸನ್ನ ಓದಿಸಿದ್ದೆ. ಅವ್ನ ಮುಂಬೈಕ ಹೋಗಿ ಯಾವುದೋ ಟೀವಿ ಚಾನಲ್‌ದಾಗ ನೌಕರಿ ಮಾಡತಿದ್ದ. ಅದನೂ ಬಿಟ್ಟು ಬೆಂಗಳೂರಿಗೆ ಹೋಗಿದ್ದು ಯಾಕಂತ ನಂಗ ಗೊತ್ತಿಲ್ರಿ. ಅವ್ನ ನಂಜೋಡಿ ಮಾತಾಡತಿರಲಿಲ್ಲ!. ನನ್ನ ಹೇಂತಿ ತಮ್ಮನ ಮಗಳು ಅನಸೂಯಾ ಅಂತ ಇಲ್ಲೇ ಮೀರಜ್‌ನಾಗ ಕಾಲೇಜ್ ಲೆಕ್ಚರರ್ ಅದಾಳ. ಆಕೀನ ನನ್ನ ಆರೈಕಿ ನೋಡಿಕೋತಾಳ. ನಮ್ಮದು ಕುಂದಗೋಳ. ಸಣ್ಣಾಂವ್ರಿದ್ದಾಗ ನಾನು, ಮಾಧವಣ್ಣ ಮೀರಜಕ ಬಂದ್ವಿ. ಕುಂದಗೋಳದಾಗ ನಮ್ಮ ಬಂಧುಗಳು ಯಾರಿದ್ದಾರ ಅನ್ನೋದು ನಂಗೊತ್ತಿಲ್ಲ...' ಎನ್ನುತ್ತಾ ವೆಂಕಟರಾವ್ ನಿಟ್ಟುಸಿರು ಬಿಟ್ಟರು.

'ನನ್ನ ಎರಡೂ ಕಾಲು ಅಡ್ಡಾಡಾಕ ಬರದಂಗ ಆಗ್ಯಾವ. ಷುಗರ್ ಬಂದ ಮ್ಯಾಲ ಹಿಂಗಾತು. ಏನು ಪಾಪ ಮಾಡಿದ್ನೋ, ಮಗನೂ ಹಿಂಗ ಮಾಡಿಕೊಂಡ. ಇದನೆಲ್ಲ ನೀ ನೋಡಬೇಕು ಅಂತಾ ದೇವರು ನನ್ನ ಜೀವಂತ ಇಟ್ಟಾನ. ಬೆಂಗಳೂರಿಗೆ ಬರಾಕ ನಂಗ ಆಗಂಗಿಲ್ರಿ. ನೀವಾ ಸುಹಾಸನ ಅಂತ್ಯಕ್ರಿಯಾ ಮಾಡ್ರಿ ಪುಣ್ಯಾ ಕಟ್ಟಿಕೊಳ್ರಿ, ನಿಮಗ ಕೈ ಮುಗಿತೀನಿ...' ಎಂದು ಹೇಳಿ ವೆಂಕಟರಾವ್ ಅಳತೊಡಗಿದರು. ರಾಜೀವ ಅವರಿಗೆ ಸಮಾಧಾನ ಹೇಳಿದ. ದೇಸಾಯಿಗಳ ಹೊಲಗಳು ಮತ್ತು ವಾಡೆ ಯಾವ ಊರಲ್ಲಿವೆ ಎನ್ನುವ ವಿವರಗಳನ್ನು ಅವರಿಂದ ಕೇಳಿ ತಿಳಿದುಕೊಂಡ.

* * *

ದೇಸಾಯರ ವಾಡೆಯನ್ನು ನೋಡಬೇಕು ಅನ್ನಿಸಿ ಬಸ್ಸು ಹತ್ತಿದ. ವೆಂಕಟರಾವ್ ಹೇಳಿದಂತೆ ವಾಡೆ ಮುಂದೆ ಇಳಿದ. ಆಗ ಇಳಿ ಸಂಜೆ. ನಾಡಹೆಂಚಿನ ಮನೆಗಳೇ ಹೆಚ್ಚಾಗಿದ್ದ ಊರಲ್ಲಿ ಇದ್ದದ್ದು ಅದೊಂದೇ ದೊಡ್ಡ ಮನೆ. ಊರವರು ಅದನ್ನು ಮಾಧವರಾವ್ ಧಣಿಗಳ ವಾಡೆ ಎನ್ನುತ್ತಿದ್ದರು. ಸುಮಾರು ನೂರಿಪ್ಪತ್ತು ವರ್ಷಗಳ ಹಿಂದೆ ಕಟ್ಟರಬಹುದಾದ ಬ್ರಿಟಿಷರ ಕಾಲದ ಬಂಗಲೆ. ಜೀರ್ಣ ಸ್ಥಿತಿಯಲ್ಲಿತ್ತು. ಬಹಳ ವರ್ಷಗಳಿಂದ ಅದರಲ್ಲಿ ಯಾರೂ ವಾಸ ಇಲ್ಲ ಅನ್ನೋದು ನೋಡುತ್ತಿದ್ದಂತೆ ಗೊತ್ತಾಯಿತು. ವಾಡೆಯ ಗೋಡೆಗಳ ಮೇಲೆ ಇದ್ದಲಿಯಿಂದ ಬೆತ್ತಲೆಯಾಗಿ ನಿಂತ ಹೆಣ್ಣು ಗಂಡಿನ ಚಿತ್ರಗಳನ್ನು ಸ್ಥಳೀಯ ಕಲಾವಿದರು ಬಿಡಿಸಿದ್ದರು. ವಾಡೆಯ ಹಜಾರದಲ್ಲಿ ಎಮ್ಮೆಗಳನ್ನು

